ಕಾಣಿಸಿಕೊಳ್ಳುವುದು ಇತ್ಯಾದಿಗಳು ಆಗಬಾರದೆಂದು ಎಷ್ಟೇ ಎಚ್ಚರ ವಹಿಸಿದರೂ, ಗಂಡನ ದುಡಿಮೆ ಸಾಲಲೇ ಇಲ್ಲ, ಗಾಡಿ ಕಟ್ಟಲು ಸಾಧ್ಯವಾಗಲೇ ಇಲ್ಲ. ಒಂದು ದಿನ, ಇನ್ನೊಂದು ದಿನ, ಮತ್ತೊಂದು ದಿನ ಎನ್ನುವ ಹೊತ್ತಿಗೆ ಮತ್ತೆ ದಿನಗಳು ಸಮೀಪಿಸಲಾರಂಭಿಸಿದವು. ನೀವೂ ಬೇಡ, ನಿಮ್ಮ ಗಾಡಿಯೂ ಬೇಡ ಎಂದು ಹೊರಟೇ ಬಿಟ್ಟೆ. ಎರಡು ವರ್ಷದ ಮಗು ಅಷ್ಟು ದೂರ ನಡೆಯಲಾರದೆಂದೂ, ಅದನ್ನು ಎತ್ತಿಕೊಂಡು, ಹೊಟ್ಟೆಯೊಳಗಿನ ಮಗುವನ್ನು ಹೊತ್ತುಕೊಂಡು ಅಷ್ಟು ದೂರ ನಡೆಯಲಾಗದೆಂದು ಸಬೂಬು ಹೇಳಿಕೊಂಡು ಆತನೂ ಹಿಂಬಾಲಿಸಿದ. ಮುಂದೆ ಮುಂದೆ ನಾನೂ, ಹಿಂದೆ ಹಿಂದೆ ಅವನೂ.

ಏರುಹೊತ್ತು ಇಳಿಯುವ ವೇಳೆಗೆ ಅದೆಲ್ಲಿತ್ತೋ ಗಾಳಿ ಸುಯ್ಯಲಾರಂಭಿಸಿತು. ಹಾಗೆ ಬೀಸುತ್ತಿದ್ದ ಗಾಳಿ ದಪ್ಪದಪ್ಪನೆಯ ಕರಿಮೋಡಗಳನ್ನೂ ಹೊತ್ತುತಂತು. ಯಾವಾಗಲೂ ವಾಯುವ್ಯದಿಂದ ಬೀಸುತ್ತಿದ್ದ ಗಾಳಿ ದಿಕ್ಕು ತಪ್ಪಿ ಎಲ್ಲ ಕಡೆಯಿಂದಲೂ ತಿರುತಿರುಗಿ ಬೀಸಲಾರಂಭಿಸಿತು. ಕ್ರಮೇಣ ಅದಕ್ಕೆ ದೂಳೂ ಸೇರಿಕೊಂಡು, ನಡೆದಾಡುವ ದಾರಿಯ ದೂಳೆಲ್ಲಾ ಗಕ್ಕನೇ ಮುಖಕ್ಕೆ ರಾಚಲಾರಂಭಿಸಿತು. ಹಿಂದೆ ಬರುತ್ತಿದ್ದ ಗಂಡ ಮುಂದೆ ಬಂದು ನನ್ನನ್ನೂ ನನ್ನ ಮಗುವನ್ನೂ ತಬ್ಬಿಹಿಡಿದು ಗಾಳಿಯ ರಭಸಕ್ಕೆ ತೂರಿಹೋಗದಂತೆ ತಡೆಹಿಡಿದ. ಆದರೆ ನಿಸರ್ಗದೆದುರು ನಾವೆಲ್ಲಾ ತರಗೆಲೆಗಳೇ. ಪ್ರಕೃತಿಯೇ ನಮ್ಮ ಮೇಲೆ ಮುನಿಸಿಕೊಂಡಿದ್ದರೆ ನಾವಾದರೂ ಏನು ಮಾಡಲು ಸಾಧ್ಯ? ಬೀಸಿ ಬರುವ ಗಾಳಿಯ ಬಿರುಸಿಗೆ ದಾರಿಯ ಇಕ್ಕೆಲದ ಮರದ ರೆಂಬೆಕೊಂಬೆಗಳು ಲಟಲಟನೆ ಮುರಿದುಬೀಳುತ್ತಿದ್ದವು. ಅವುಗಳು ಎಲ್ಲಿ ಮೇಲೆಯೇ ಮುರಿದುಬಿದ್ದಾವೋ ಎಂದು ಮರಗಳಿಂದ ದೂರ ದೂರ ಹೋಗಬೇಕೆಂದುಕೊಳ್ಳುವಷ್ಟರಲ್ಲಿಯೇ ಗಾಳಿಯ ಬಿರುಸು ನಮ್ಮನ್ನು ಗೋಚಿಕೊಂಡು ಹೋಗುತ್ತಿತ್ತು. ಇಳಿಜಾರಿನ ನಾಟವನ್ನು ಅಡರುಗಾಲು ಹಾಕಿ ತಡೆಯುವವನಂತೆ ಗಂಡನೆನಿಸಿಕೊಂಡವನು ಪಾಪ ನಮ್ಮನ್ನು ರಕ್ಷಿಸಲು ಹರಸಾಹಸಪಡುತ್ತಿದ್ದ.

ಇಳಿಹೊತ್ತು ಶುರುವಾಗುವ ಮೊದಲೇ ಸುತ್ತಲೂ ಕತ್ತಲೆಯು ಮುಸುಕಿ, ರಣಮಳೆ ಎನ್ನುವುದು ದಿಕ್ಕುದೆಸೆ ಎಲ್ಲವನ್ನೂ ತಪ್ಪಿ ಚಚ್ಚಲಾರಂಭಿಸಿತು. ಮಳೆಯ ಹನಿಗಳೆಂಬುವವು ಮೊಳೆಯ ರೂಪದಲ್ಲಿ ಆಕಾಶದಿಂದ ಧರೆಗಿಳಿಯುತ್ತಿದ್ದರೆ, ಯಾರೋ ಬಿಲ್ಲಿನಿಂದ ಮೊಳೆಯ ಮಳೆ ಸುರಿಸಿದಂತೆ ಭಾಸವಾಗುತ್ತಿತ್ತು. ಅದರ ಜೊತೆಗೇ ಆಲಿಕಲ್ಲುಗಳೂ ಎತ್ತೆತ್ತಲಿಂದಲೋ ರಾಚುತ್ತಿದ್ದರೆ, ಮುಖ ಉಳಿಸಿಕೊಳ್ಳುವುದು ಎಲ್ಲಿ, ತಲೆ ಉಳಿಸಿಕೊಳ್ಳುವುದು ಎಲ್ಲಿ ಎಂದೇ ಗೋಚರಿಸದೆ ಸುಮ್ಮನೇ ಬೋಳುಮರದಂತೆ ಗುಪ್ಪರಿಸಿ ಕುಂತುಬಿಟ್ಟೆವು. ಹೀಗೆ ತಾಸುಗಟ್ಟಲೇ ಜಪ್ಪಿದ ಮಳೆಗೆ ಮೂವರೂ ತೊಯ್ದು ತೆಪ್ಪೆಯಾಗಿ ಬಸವಳಿದೆವು. ಮಗುವಂತೂ ಚಳಿಗೆ ತತ್ತರಿಸಿ ನಡುಗುತ್ತಿದ್ದರೆ, ನಾನು ನನ್ನ ಮಡಿಲಲ್ಲಿ ಇರುಕಿಸಿಕೊಂಡು ಬೆಚ್ಚಗೆ ಮಾಡಲು ಪ್ರಯತ್ನಿಸುತ್ತಿದ್ದೆ. ಯಾವಾಗ ನಾನೂ ನಡುಗಲಾರಂಭಿಸಿದೆನೋ ಆಗ ಗಂಡನೂ ಭಯದಿಂದ ನಡುಗಲಾರಂಭಿಸಿದ. ಎಲ್ಲ ನನ್ನಿಂದಲೇ ಎಂದು ವಾಚಾಮಗೋಚರವಾಗಿ ಬೈದುಕೊಳ್ಳುತ್ತಿದ್ದ. ಯಾವಾಗ ಬೀಸುವ ಗಾಳಿ ಕಡಿಮೆಯಾಗಿ ಜರಡಿಯ ತೂತಿನಿಂದೆಂಬಂತೆ ನೇರವಾಗಿ ಬರೀ ಮಳೆಯೇ ಸುರಿಯಲಾರಂಭಿಸಿತೋ ಆಗ ದಟ್ಟ ಎಲೆಗಳಿಂದಾವೃತವಾದ ಪೊದೆಯಂಥ ಮರದ ಬುಡವನ್ನು ಆಶ್ರಯಿಸಿ ಎಲ್ಲರೂ ಗುಬ್ಬರಿಸಿ ಕುಳಿತುಬಿಟ್ಟೆವು.

ಈ ಬಸುರಿನ ಬಯಕೆಯೆಂಬುದು ಯಾಕಿಷ್ಟು ನಮ್ಮನ್ನು ಕಾಡುತ್ತಿದೆಯೆಂಬುದು ಚಿದಂಬರ ರಹಸ್ಯವಾಗಿತ್ತು. ಊರು, ಜನ, ಮನೆ ಎಲ್ಲವನ್ನೂ ತೊರೆದು ಯಾಕಿಂಥ ನಿರಾಶ್ರಿತ ಪ್ರದೇಶಕ್ಕೆ ಬಂದು ಸಿಲುಕುತ್ತಿದ್ದೇನೆ ಎಂಬುದೇ ಅರ್ಥವಾಗದೇ ನನ್ನನ್ನೇ ನಾನು ಬೈದುಕೊಂಡೆ. ವಿಧಿಲಿಖಿತ, ನಾವೆಲ್ಲಾ ನಿಮಿತ್ತ ಮಾತ್ರ ಎಂದು ಗಂಡ ಸಮಾಧಾನ ಮಾಡಿದರೂ, ಪಾಪಿ ನಾನು, ಎಂಥ ಅನಾಹುತಗಳನ್ನು ಪದೇ ಪದೇ ಮೈಮೇಲೆ ಎಳೆದುಕೊಳ್ಳುತ್ತಿದ್ದೇನೆ ಎಂದು ಪದೇ ಪದೇ ಹಳಿದುಕೊಳ್ಳುತ್ತಿದ್ದೆ.

ನನ್ನ ಬೈಗುಳಗಳು ನನ್ನನ್ನೇ ಕುರಿತಾಗಿದ್ದರೂ, ತನ್ನನ್ನೇ ಬೈಯ್ಯುತ್ತಿದ್ದೇನೇನೋ ಎಂದು ಹೆದರಿದ ಮಳೆರಾಯ ಬಿಡುವುಕೊಟ್ಟ. ಇಳಿಸಂಜೆಯ ಸೂರ್ಯನ ಕಿರಣಗಳು ಪಶ್ಚಿಮದಲ್ಲಿ ಮೂಡಿ ಆಗಸದ ತುಂಬೆಲ್ಲ ಬಂಗಾರದ ರಂಗನ್ನು ಎರಚಿ, ಯಾರಾದರೂ ಕದ್ದಾರೇನೋ ಎಂದು ಹೆದರಿ ಹಾಗೆಯೇ ಗುಡ್ಡಬೆಟ್ಟಗಳ ಮರೆಗೆ ಜಾರಿದ.

ಹತ್ತಿರದಲ್ಲೆಲ್ಲೂ ಜನವಸತಿಯ ಸುಳಿವೂ ಕಾಣದೇ,